ಖರ್ಚಾದ ಹಣ

ರೂ. 5.882 ಲಕ್ಷ - ಉದ್ಯೋಗ ಸೃಜನೆಗಾಗಿ.

ರೂ. 2.903 ಲಕ್ಷ - ಕುಡಿಯುವ ನೀರಿನ ಪೂರೈಕೆಗಾಗಿ.

ಈ) ಈ ರೀತಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಉ) ಮೇಲೆ (ಈ) ಗೆ ನೀಡಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ

1283 - ಶ್ರೀ ಉಮೇಶ್ ಭಟ್ (ಅಂಕೋಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೇ?

ಅ) *1990-91ನೇ ಸಾಲಿನಲ್ಲಿ ದೇವಸ್ಥಾನಗಳ ಅಭಿವೃದ್ಧಿಗೋಸ್ಕರ ರಾಜ್ಯ ಸರ್ಕಾರ ಗುಲ್ಬರ್ಗಾ ಜಿಲ್ಲೆಗೆ ಎಷ್ಟು ಅನುದಾನ ನೀಡಿದೆ?*

ಆ) *ಬೇರೆ ಜಿಲ್ಲೆಯ ದೇವಸ್ಥಾನಗಳ ಅಭಿವೃದ್ಧಿಗೋಸ್ಕರ ಅಷ್ಟೇ ಪ್ರಮಾಣದ ಅನುದಾನವನ್ನು ನೀಡಲಾಗಿದೆಯೇ?*

ಇ) *ಅನುದಾನ ನೀಡದೇ ಇದ್ದಲ್ಲಿ ಕಾರಣಗಳೇನು?*

ಈ) *ಅನುದಾನ ನೀಡುವದಿದ್ದಲ್ಲಿ ಎಂದಿನಿಂದ ನೀಡಲಾಗುವುದು?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ರೂ. 25,90,000-00.

ಆ) ಇಲ್ಲ.

ಇ) ಪ್ರತಿ ಜಿಲ್ಲೆಯಲ್ಲಿರುವ ದೇವಸ್ಥಾನಗಳ ಹಣಕಾಸಿನ ಪರಿಸ್ಥಿತಿ, ಹಿಂದಿನ ವರ್ಷಗಳಲ್ಲಿ ಪ್ರತಿ ಜಿಲ್ಲೆಗೆ ಬಿಡುಗಡೆಮಾಡಿದ ಅನುದಾನದ ಮೊತ್ತ ಹಾಗೂ ಪ್ರತಿ ಜಿಲ್ಲೆಗಳಿಂದ ಅನುದಾನಕ್ಕೋಸ್ಕರ ಬಂದ ಮನವಿ. ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಅನುದಾನವನ್ನು ಮಂಜೂರು ಮಾಡಲಾಗಿದೆ.

ಈ) 30-3-1991 ರ ಒಳಗೆ

ಸವಣೂರಿನಲ್ಲಿ ತೋಟಗಾರಿಕೆಯ ಕಾಲೇಜು ಪ್ರಾರಂಭ

1284 - ಶ್ರೀ ಮಂಜುನಾಥ್ ಸಿ. ಕುನ್ನೂರ (ಶಿಗ್ಗಾಂವ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸವಣೂರಿನಲ್ಲಿ ತೋಟಗಾರಿಕೆ ಮಹಾವಿದ್ಯಾಲಯವನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?*

ಆ) *ಸದರಿ ಉದ್ದೇಶಕ್ಕಾಗಿ ಸವಣೂರು ತಾಲ್ಲೂಕು ಪಂಚಾಯತ್ ಸಮಿತಿಯ ತನ್ನ 50 ಎಕರೆ ಜಮೀನನ್ನು ಹಾಗೂ ಉಚಿತ ಕಟ್ಟಡವೊಂದನ್ನು ಕೊಡಲು ಮುಂದೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ, ಸದರಿ ಕಾಲೇಜನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಇಲ್ಲ.

ಆ) ಸರ್ಕಾರದ ಮಟ್ಟದಲ್ಲಿ ಮಾಹಿತಿ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.